## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **767/2023**

ಸಿ.ಡಬ್ಲ್ಯೂ- 8
ಪಿ.ಡಬ್ಲ್ಯೂ- 3

**ದಿನಾಂಕಃ 24-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ದಿಲ್‌ಶಾದ ಮುಲ್ತಾನಿ |
| ತಂದೆಯ/ಗಂಡನ ಹೆಸರು | : ಮಲಿಕಸಾಬ |
| ವಯಸ್ಸು | : 38 ವರ್ಷ |
| ಉದ್ಯೋಗ | : ಗೃಹಿಣಿ |
| ವಾಸ ಸ್ಥಳ | : ಅರಭಾವಿಮಠ |
| ತಾಲೂಕು | : ಮೂಡಲಗಿ |

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-</u>**

ಮೃತ ಪಿರಮಾ ಮಲಿಕಸಾಬ ನನ್ನ ನಾದಿನಿಯ ಮಗಳು. ಚಾಸಾ 1 ಮೃತಳ ತಂದೆ. ಚಾಸಾ 7 ನನ್ನ ಪತಿ. ಸುಮಾರು 8 ವರ್ಷಗಳ ಹಿಂದೆ ನನ್ನ ನಾದಿನಿಯ ಮಗಳು ಊಟ ಮಾಡಿ ವಾಕಿಂಗ ಹೋಗಿದ್ದು ರಾತ್ರಿ 8-30 ರ ಸಮಯದಲ್ಲಿ ಜೋರಾದ ಶಬ್ದ ಕೇಳಿ ಸ್ಥಳಕ್ಕೆ ಹೋಗಿ ನೋಡಲಾಗಿ ಅರಭಾವಿಮಠದ ಹತ್ತಿರ ದ್ವಿಚಕ್ರ ವಾಹನದಿಂದ ಅಪಘಾತವಾಗಿದ್ದು ಆಕೆಯ ತಲೆಗೆ ತೀವ್ರಸ್ವರೂಪದ ಗಾಯವಾಗಿರುತ್ತದೆ. ನಂತರ ಆಕೆಯನ್ನು ಗೋಕಾಕನ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿದ್ದು, ಆಕೆ ಮೃತಪಟ್ಟಿರುವುದಾಗಿ ವೈದ್ಯರು ಹೇಳಿರುತ್ತಾರೆ. ಮೃತಳಿಗೆ ದ್ವಿಚಕ್ರ ವಾಹನ ಅಪಘಾತಪಡಿಸಿರುವುದಾಗಿ ತಿಳಿದುಬಂದಿದ್ದು ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ಮಾನ್ಯ ನ್ಯಾ ದ ಮುಂದಿರುವ ಆರೋಪಿ ಚಾಲಕನನ್ನು ನೋಡಿ ಆತನೇ ಅಪಘಾತಪಡಿಸಿದ ವ್ಯಕ್ತಿ ಎಂದು ಗುರುತಿಸಿರುತ್ತಾರೆ. ಆರೋಪಿ ಚಾಲಕನನ್ನು ನನ್ನ ಪತಿ ಗುರುತಿಸಿ ನನಗೂ ಈ ಬಗ್ಗೆ ಮಾಹಿತಿ ನೀಡಿರುತ್ತಾರೆ.

**(ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಮತ್ತು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ಅವರಿಂದಃ</u>**

ದಿಃ 02-05-2018 ರಂದು ಸಂಜೆ 8-30 ರ ಸಮಯದಲ್ಲಿ ಅರಭಾವಿಮಠದ ಹತ್ತಿರ ನನ್ನ ಸೊಸೆ ಪಿರಮಾ ಮಲಿಕಸಾಬ ನನ್ನ ಮಗನ ಜೊತೆ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಮಾನ್ಯ ನ್ಯಾದ

ಮುಂದಿರುವ ಆರೋಪಿ ಚಾಲಕನು ದ್ವಿಚಕ್ರ ವಾಹನ No.KA 49 W 0558 ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಿಂದಿನಿಂದ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತದಿಂದ ನನ್ನ ಸೊಸೆಯ ತಲೆಯ ಹಿಂಭಾಗ ಮತ್ತು ಕಾಲಿಗೆ ಪೆಟ್ಟಾಗಿದ್ದು ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಉಪಚಾರ ಫಲಿಸದೇ ಅದೇ ದಿನ ಮೃತಪಟ್ಟಿರುತ್ತಾಳೆ ಎಂದರೆ ಸರಿ. ಆರೋಪಿ ಚಾಲಕನು ತನ್ನ ದ್ವಿಚಕ್ರ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿ.

ಈ ಬಗ್ಗೆ ಚಾಸಾ 1 ರವರು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿ ಚಾಲಕನ ಹೆಸರು ಸಂತೋಷ ಸುರೇಶ ನಾಯಕ ಪಿ ಜಿ ಮಲ್ಲಾಪೂರ ನಿವಾಸಿ ಎಂದು ಪೊಲೀಸರು ನನಗೆ ಆರೋಪಿಯನ್ನು ಠಾಣೆಯಲ್ಲಿ ತೋರಿಸಿ ಹೇಳಿರುತ್ತಾರೆಂದರೆ ಸರಿ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ Sri.MIB ವಕೀಲರಿಂದಃ**

ನಮ್ಮ ಮನೆಯಿಂದ ಅಪಘಾತ ನಡೆದಿದೆ ಎಂದು ಹೇಳಲಾದ ಸ್ಥಳ 1 ಕಿ ಮೀ ದೂರದಲ್ಲಿದೆ. ಅರಭಾವಿಮಠದಿಂದ ಅಪಘಾತ ನಡೆದಿದೆ ಎಂದು ಹೇಳಲಾದ ಸ್ಥಳ 500 ಮೀ ದೂರದಲ್ಲಿದೆ. ವಾಹನದ ಶಬ್ದ ಕೇಳಿ ಸ್ಥಳಕ್ಕೆ ಓಡಿ ಹೋಗಿರುತ್ತೇವೆ. ವಾಹನ ಮೃತಳಿಗೆ ಡಿಕ್ಕಿಪಡಿಸಿರುವುದನ್ನು ನಾನು ನೋಡಿರುವುದಿಲ್ಲ. ಮಾನ್ಯ ನ್ಯಾ ದ ಮುಂದಿರುವ ಆರೋಪಿಯೇ ಅಪಘಾತಪಡಿಸಿರುವುದಾಗಿ ನನ್ನ ಪತಿ ನನಗೆ ಹೇಳಿರುತ್ತಾನೆ. ಆರೋಪಿಯನ್ನು ಇದೇ ಮೊದಲ ಬಾರಿಗೆ ಮಾನ್ಯ ನ್ಯಾ ದಲ್ಲಿ ನೋಡುತ್ತಿದ್ದೇನೆ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **767/2023**

ಸಿ.ಡಬ್ಲ್ಯೂ- 7
ಪಿ.ಡಬ್ಲ್ಯೂ- 2

**ದಿನಾಂಕಃ 24-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಮಲಿಕಸಾಬ ಮುಲ್ತಾನಿ |
| ತಂದೆಯ/ಗಂಡನ ಹೆಸರು | : ಇಮಾಮಸಾಬ |
| ವಯಸ್ಸು | : 51 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ ಸ್ಥಳ | : ಅರಭಾವಿಮಠ |
| ತಾಲೂಕು | : ಮೂಡಲಗಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ಮೃತ ಪಿರಮಾ ಮಲಿಕಸಾಬ ನನ್ನ ಸೊಸೆ. ಚಾಸಾ 1 ಮೃತ ಸೊಸೆಯ ತಂದೆ. ಚಾಸಾ 8 ನನ್ನ ಪತ್ನಿ. ಸುಮಾರು 10 ವರ್ಷಗಳ ಹಿಂದೆ ಅರಭಾವಿಮಠದ ಹತ್ತಿರ ದ್ವಿಚಕ್ರ ವಾಹನದಿಂದ ಅಪಘಾತಗಿರುವ ಬಗ್ಗೆ ನನಗೆ ನನ್ನ ಪತ್ನಿ ಮತ್ತು ಮಕ್ಕಳು ಹೇಳಿರುತ್ತಾರೆ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುವುದಿಲ್ಲ. ಆರೋಪಿ ಚಾಲಕನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಮತ್ತು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ಅವರಿಂದಃ**

ದಿಃ 02-05-2018 ರಂದು ಸಂಜೆ 8-30 ರ ಸಮಯದಲ್ಲಿ ಅರಭಾವಿಮಠದ ಹತ್ತಿರ ನನ್ನ ಸೊಸೆ ಪಿರಮಾ ಮಲಿಕಸಾಬ ನನ್ನ ಮಗನ ಜೊತೆ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಮಾನ್ಯ ನ್ಯಾದ ಮುಂದಿರುವ ಆರೋಪಿ ಚಾಲಕನು ದ್ವಿಚಕ್ರ ವಾಹನ No.KA 49 W 0558 ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಿಂದಿನಿಂದ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ಸೊಸೆಯ ತಲೆಯ ಹಿಂಭಾಗ ಮತ್ತು ಕಾಲಿಗೆ ಪೆಟ್ಟಾಗಿದ್ದು ಆಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಉಪಚಾರ ಫಲಿಸದೇ ಅದೇ ದಿನ ಮೃತಪಟ್ಟಿರುತ್ತಾಳೆ ಎಂದರೆ ಸರಿಯಲ್ಲ.

ಪ್ರಕರಣದಲ್ಲಿ ಹೇಳಿರುವ ಅಪಘಾತವು ಆರೋಪಿ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಚಾಲಕನ ಹೆಸರು ಸಂತೋಷ ಸುರೇಶ ನಾಯಕ ಪಿ ಜಿ ಮಲ್ಲಾಪೂರ ನಿವಾಸಿ ಎಂದು ಪೊಲೀಸರು ನನಗೆ ಆರೋಪಿಯನ್ನು ಠಾಣೆಯಲ್ಲಿ ತೋರಿಸಿ ಹೇಳಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಮತ್ತು ಮರುಹೇಳಿಕೆಯ ಭಾಗಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು. ಅಪಘಾತದಲ್ಲಿ ಸಮಯದಲ್ಲಿ ಹಾಜರಿದ್ದು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.